ಶ್ರೀ ಸುಧೀಂದ್ರರಾವ್ ಕಸಬೆ.— ಅಲ್ಲಿರತಕ್ಕ ಹಣವನ್ನು ವ್ಯವಸ್ಥಾಪಕರು ತಿಂದು ಷೇರುದಾರರಿಗೆ ಮೋಸ ಮಾಡುತ್ತಿದ್ದಾರೆ. ಸಿ.ಒ.ಡಿ. ತನಿಖೆ ಮಾಡಿದರೆ ಎಲ್ಲ ವಿಚಾರಗಳಂ ಬಯಲಿಗೆ ಬರುತ್ತವೆ ; ಇದರ ಬಗ್ಗೆ ಸರ್ಕಾರದ ಅಭಿಪ್ರಾಯ ಏನು ?

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಸದಸ್ಯರ ಸಲಹೆಯನ್ನು ಸರ್ಕಾರ ಪರಿಶೀಲನೆಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಪ್ರಶ್ನೆ : 724 (1852) ಸದಸ್ಯರು ಗೈರು ಹಾಜರಿ.

ವಿಷಯ : ರಾಜಾಜಿನಗರ ಕೈಗಾರಿಕಾ ವಸಾಹತು ಬಗ್ಗೆ.

ಪ್ರ. ಸಂಖ್ಯೆ 725 (1362) ಶ್ರೀ ವಸಂತ ವಿ. ಸಾಲ್ಯಾನ್ (ಕಾಪು).— ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ರಾಜಾಜಿನಗರ ಕೈಗಾರಿಕಾ ಕ್ಷೇತ್ರದಲ್ಲಿ ಎಷ್ಟು ಕೈಗಾರಿಕೆಗಳಿವೆ, ಎಷ್ಟು ಶೆಡ್ ಮತ್ತು ಗೋಡನ, ಗಳಿವೆ ಹಾಗಿದ್ದರೆ ಭರ್ತಿ ಆಗದಿರುವ ಅವುಗಳನ್ನು ಯಾವಾಗ ಭರ್ತಿಮಾಡಲಾಗುವುದು ;

ಆ) ಪೀಣ್ಯದ ಕೈಗಾರಿಕಾ ಕ್ಷೇತ್ರದಲ್ಲಿ ಖಾಲಿ ಇರುವ ಶೆಡ್‌ಗಳೆಷ್ಟು ;

ಇ) ಅವುಗಳನ್ನು ಭರ್ತಿಮಾಡುವಾಗ ಯಾವ ಆಧಾರವನ್ನು ಅನುಸರಿಸಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

ಅ) ರಾಜಾಜಿನಗರ ಕೈಗಾರಿಕಾ ವಸಾಹತುವಿನಲ್ಲಿ 143 ಕೈಗಾರಿಕಾ ಶೆಡ್ಡುಗಳು ಹಾಗೂ 114 ಗೋಡೌನ್‌ಗಳು ಇವೆ. ಮತ್ತು ಇವೆಲ್ಲವೂ ಭರ್ತಿಯಾಗಿವೆ.

ಆ) ಇಲ್ಲಿ ಶೆಡ್ಡುಗಳು ಗೋಡೌನ್‌ಗಳು ಯಾವುದು ಖಾಲಿ ಇಲ್ಲವುದಿಲ್ಲ.

ಇ) ಶೆಡ್ಡುಗಳು ಪೂರ್ಣಗೊಂಡ ನಂತರ ಅವುಗಳ ವಿವರಗಳನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ನಿಗಮ ನಿಯಮಿತ ಬೆಂಗಳೂರಿನ ಕಛೇರಿಯಲ್ಲಿ ಅಧಿಸೂಚಿಸಿ ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಶೆಡ್ಡು ವಿತರಣೆಗಾಗಿ ಅರ್ಜಿಗಳನ್ನು ಕರೆಯಲಾಗುತ್ತದೆ ; ಹೀಗೆ ಸ್ವೀಕೃತವಾದ ಅರ್ಜಿಗಳನ್ನು ಸರ್ಕಾರದವರು ಹಾಕಿದ ಕಟ್ಟುಪಾಡುಗಳ ಮೇರೆಗೆ ಶೆಡ್ ವಿತರಣಾ ಸಮಿತಿಯಲ್ಲಿ ಪರಿಶೀಲಿಸಿ ಶೆಡ್‌ಗಳನ್ನು ವಿತರಣೆಮಾಡ ಲಾಗುತ್ತದೆ.

ಶ್ರೀ ವಸಂತ ವಿ. ಸಲ್ಯಾನ್.— ಮಾನ್ಯ ಅಧ್ಯಕ್ಷರೇ, ರಾಜಾಜಿನಗರದಲ್ಲಿರುವ ಕೈಗಾರಿಕಾ ಎಸ್ಟೇಟ್‌ನಲ್ಲಿ ಸುಮಾರು 5 ಷೆಡ್ಡುಗಳು ಖಾಲಿ ಇವೆ ಎಂದು ನನ್ನ ಗಮನಕ್ಕೆ ಬಂದಿದೆ. ಮಂತ್ರಿಗಳು ಕಾಗದ ಕೊಟ್ಟರೆ ಅಧಿಕಾರಿಗಳು ಕೂಡಲೇ ಮಂಜೂರು ಮಾಡುತ್ತಾರೆ. ಜರ್ಮನಿಯಿಂದ ಬಂದಂಥ ಯೋಗ್ಯ ಇಂಜಿನಿಯರ್ ಒಬ್ಬರು ಷೆಡ್ಡು ಬೇಕೆಂದು ಅರ್ಜಿ ಹಾಕಿದಾಗ, ಮಂತ್ರಿಗಳಿಂದ ಪತ್ರ ತನ್ನಿ ಕೊಡುತ್ತೇವೆಂದು ಹೇಳಿದ್ದಾರೆ. ಅಲ್ಲಿ ಬಹಳ ಅವ್ಯವಹಾರ ನಡೆಯುತ್ತಿರುವುದರಿಂದ ದಯವಿಟ್ಟು ಸಿ.ಓ.ಡಿ.ಯಿಂದ ತನಿಖೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ, ಪೆಡ್ಡುಗಳನ್ನು ಕೊಡುವಾಗ ಶಿಫಾರಸ್ಸು ಹಾಗೂ ಹಣ ತೆಗೆದುಕೊಳ್ಳುತ್ತಿದ್ದಾರೆ ; ಇದರ ಬಗ್ಗೆ ಸಚಿವರು ಏನು ಹೇಳುತ್ತಾರೆಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಅಲ್ಲಿ ಷೆಡ್ಡುಗಳು ಖಾಲಿ ಇಲ್ಲ, ಯಾವುದಾದರೂ ಉದ್ದಿಮೆದಾರರು ಖಾಲಿ ಮಾಡಿದಾಗ ಅಂತವುಗಳನ್ನು ಬೇರೆಯವರಿಗೆ ಕೊಡಬೇಕು. ಕೆಲವು ಸಲ ಅವರು ಹಣ ಕೊಡದೇ ಇದ್ದಾಗ ಜಪ್ತಿಮಾಡಿ ಹೊರಗಡೆ ಹಾಕಬೇಕು. ವ್ಯಕ್ತಿಗಳ ಗುಣವನ್ನು ನೋಡಿಕೊಂಡು ಅವಶ್ಯಕತೆ ಇರತಕ್ಕವರಿಗೆ ಕೊಡಬೇಕು. ತಾವು ಯಾರ ಬಗ್ಗೆ ಹೇಳಿದ್ದೀರಿ ; ಅವರಿಂದ ಮನವಿ ಬಂದರೆ ಸಂಬಂಧಪಟ್ಟವರಿಗೆ ಕಳುಹಿಸಿಕೊಡುತ್ತೇನೆ. ದೂರನ್ನು ವಿಚಾರಣೆಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ : ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳಲ್ಲಿರುವ ಕಾರ್ಮಿಕರ ವೇತನ ಶ್ರೇಣಿಯ ಪುನರ್‌ವಿಮರ್ಶೆ.

ಪ್ರ. ಸಂಖ್ಯೆ 712 (1308) ಶ್ರೀ ಪಂಪಾಪತಿ (ದಾವಣಗೆರೆ).— ಮಾನ್ಯ ಕಾರ್ಮಿಕ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಸಕ್ಕರೆ ಕಾರ್ಮಿಕರ ವೇತನ ಪರಿಷ್ಕರಣವಾಗಿ ಎಷ್ಟು ವರ್ಷಗಳು ಕಳೆದಿವೆ.

ಆ) ಸಕ್ಕರೆ ಕಾರ್ಮಿಕರ ಮಹಾ ಮಂಡಳಿಯು ಈ ಬಗ್ಗೆ 3 ವರ್ಷಗಳ ಹಿಂದೆ ವೇತನ ಪರಿಷ್ಕರಣ ಕ್ಕಾಗಿ ಮನವಿಗಳನ್ನು ಸಲ್ಲಿಸಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ವೇತನ ಪರಿಷ್ಕರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ;